ಆ) ಈ ಅಧಿಸೂಚನೆಯಿಂದ ಸರ್ಕಾರಿ ಸಾರಿಗೆ ಸಂಸ್ಥೆಗೆ ನಷ್ಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಬಂದಿದ್ದಲ್ಲಿ, ಅಧಿಸೂಚನೆ ರದ್ದುಗೊಳಿಸಲು ಸರ್ಕಾರ ನಿರ್ಧರಿಸಿದೆಯೇ ?

ಈ) ಹುಬ್ಬಳ್ಳಿ– ಧಾರವಾಡ ಮಹಾನಗರದಲ್ಲಿ ಬೇಂದ್ರೆ ನಗರ ಸಾರಿಗೆ ಸಂಸ್ಥೆಗೆ ಕೊಟ್ಟಿರುವ ಪರವಾನಿಗೆ ವಾಪಸ್ಸು ಪಡೆಯಲು ಸರ್ಕಾರ ನಿರ್ಧರಿಸಿದೆಯೇ; ಯಾವಾಗ ವಾಪಸ್ಸು ಪಡೆಯಲಾಗುವುದು ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಹೌದು.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಈ) ನಿರ್ಧರಿಸಿಲ್ಲ.

946(1521) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ.(ಬ್ರಹ್ಮಾವರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉಡುಪಿ ತಾಲ್ಲೂಕಿನ ಕೋಡಿಬೆಂಗ್ರಿಯಲ್ಲಿ ಬ್ರೇಕ್ ವಾಟರ್ ನಿರ್ಮಿಸಲು ಮೀನುಗಾರರಿಂದ ಹಾಗೂ ಗ್ರಾಮಸ್ಥರಿಂದ ಬಹು ದಿನಗಳಿಂದ ಬೇಡಿಕೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಬ್ರೇಕ್ ವಾಟರ್ ನಿರ್ಮಿಸಲು ಸರ್ಕಾರವು ಕೈಗೊಂಡ ಕ್ರಮವೇನು ;

ಇ) ಇದರ ನಿರ್ಮಾಣಕ್ಕೆ ತಗಲುವ ವೆಚ್ಚವೆಷ್ಟು;

ಈ) ಇದಕ್ಕಾಗಿ ಮೀಸಲಿಟ್ಟ ಅನುದಾನವೆಷ್ಟು (ವಿವರ ನೀಡುವುದು)?

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು) :

ಅ) ಉಡುಪಿ ತಾಲ್ಲೂಕಿನ ಕೋಡಿಬೆಂಗ್ರಿಯಲ್ಲಿ ಬ್ರೇಕ್ ವಾಟರ್ ನಿರ್ಮಿಸಲು ಮೀನುಗಾರರಿಂದ ಹಾಗೂ ಗ್ರಾಮಸ್ಥರಿಂದ ಸದ್ಯ ಯಾವುದೇ ಅಧಿಕೃತವಾದ ಬೇಡಿಕೆ ಇರುವುದಿಲ್ಲ.

ಆ) ಅನ್ವಯಿಸುವುದಿಲ್ಲ

ಇ) ಅನ್ವಯಿಸುವುದಿಲ್ಲ

ಈ) ಈ ಬಗ್ಗೆ ಯಾವುದೇ ಅನುದಾನವನ್ನು ಪ್ರಸಕ್ತ ಸಾಲಿನಲ್ಲಿ ನಿಗದಿಪಡಿಸಿರುವುದಿಲ್ಲ.

947(1613) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉಡುಪಿ ತಾಲ್ಲೂಕಿನ ಕೋಡಿ ಕನ್ಯಾನದಲ್ಲಿ ಟಿ–ಜಟ್ಟಿ ನಿರ್ಮಿಸಲು ಸರ್ಕಾರವು ಕೈಗೊಂಡ ಕ್ರಮವೇನು ;

ಆ) ಇದರ ನಿರ್ಮಾಣಕ್ಕಾಗಿ ತಗಲುವ ವೆಚ್ಚ ಹಾಗೂ ಮೀಸಲಿಟ್ಟ ಅನುದಾನವೆಷ್ಟು;

ಇ) ಸದರಿ ನಿರ್ಮಾಣವನ್ನು ಯಾವಾಗ ಕೈಗೊಳ್ಳಲಾಗುವುದು ಮತ್ತು ಪೂರ್ಣಗೊಳಿಸಲು ಹಾಕಿಕೊಂಡಿರುವ ಕಾಲಾವಧಿ ನಿಗದಿಪಡಿಸಲಾಗುವುದೇ ?

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು) :

ಅ) ಉಡುಪಿ ತಾಲ್ಲೂಕಿನ ಕೋಡಿ–ಕನ್ಯಾನದಲ್ಲಿ ಟಿ–ಜಟ್ಟಿ ನಿರ್ಮಾಣದ ಅಗತ್ಯತೆಯ ಬಗ್ಗೆ ಪೂರ್ವಭಾವಿ ಮಾಹಿತಿಗಳನ್ನು ಸ್ಥಳೀಯ ಪ್ರಾಧಿಕಾರಗಳಿಂದ ಸಂಗ್ರಹಿಸಲಾಗುತ್ತಿದೆ.

ಆ) ಮೇಲಿನ ಕಾರಣದಿಂದಾಗಿ, ಉದ್ಭವಿಸುವುದಿಲ್ಲ.

ಇ) ಮೇಲಿನ ಕಾರಣದಿಂದಾಗಿ, ಉದ್ಭವಿಸುವುದಿಲ್ಲ.

949(1531) ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಒಳನಾಡು ಮೀನುಗಾರರಿಗೆ ಸರ್ಕಾರ ವಾಸಿಸಲು ಮನೆ ಕಟ್ಟಿಕೊಡುತ್ತಿದೆಯೇ; ಹೌದಾದಲ್ಲಿ, ಕಳೆದ ಹಾಗೂ ಪ್ರಸ್ತುತ ಸಾಲಿನಲ್ಲಿ ಕಟ್ಟಿದ ಮನೆಗಳ ಸಂಖ್ಯೆ ಎಷ್ಟು (ಚಿಕ್ಕಮಗಳೂರು ಜಿಲ್ಲೆಯ ತಾಲ್ಲೂಕುವಾರು ವಿವರ ನೀಡುವುದು) :

ಆ) ಭದ್ರಾ ಹಿನ್ನೀರಿನಲ್ಲಿ ಇರುವ ಮೀನುಗಾರರ ಸಂಖ್ಯೆ ಎಷ್ಟು :

ಇ) ಭದ್ರಾ ಹಿನ್ನೀರಿನಲ್ಲಿ ಎಷ್ಟು ಲಕ್ಷ ಮೀನು ಮರಿಗಳನ್ನು ಬಿಡಲಾಗಿದೆ?

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು) :

ಅ) ಹೌದು. ಚಿಕ್ಕಮಗಳೂರು ಜಿಲ್ಲೆಯ ಈ ಕೆಳಕಂಡ ತಾಲ್ಲೂಕುಗಳಿಗೆ ಮತ್ಸ್ಯಾಶ್ರಯ ಮನೆಗಳು ಮಂಜೂರಾಗಿದ್ದು, ಮನೆಗಳ ನಿರ್ಮಾಣ ಕಾರ್ಯವನ್ನು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ(ನಿ) ಇವರಿಗೆ ವಹಿಸಲಾಗಿದೆ.

| ತಾಲ್ಲೂಕು | ಹಿಂದಿನ ಸಾಲು | ಪ್ರಸಕ್ತ ಸಾಲು |
|---|---|---|
| ಕಡೂರು | 20 | – |
| ತರೀಕೆರೆ | 10 | – |

ಈ 30 ಮನೆಗಳ ಪೈಕಿ ಈವರೆಗೆ 21 ಫಲಾನುಭವಿಗಳನ್ನು ಅನುಮೋದಿಸಿದ್ದು ಒಂದು ಮನೆಯನ್ನು ನಿರ್ಮಿಸಲಾಗಿದೆ.

ಆ) ಭದ್ರಾ ಹಿನ್ನೀರಿನಲ್ಲಿ ಅಂದಾಜು 230 ಸಕ್ರಿಯ ಮೀನುಗಾರರಿರುತ್ತಾರೆ.

ಇ) 2001–02ನೇ ಸಾಲಿನಿಂದ ಇಲ್ಲಿಯವರೆಗೆ ಭದ್ರಾ ಹಿನ್ನೀರಿನಲ್ಲಿ 11.47 ಲಕ್ಷ ಮೀನುಮರಿಗಳನ್ನು ಬಿಡುಲಾಗಿದೆ.

950(1532) ಶ್ರೀ ಜೀವರಾಜ್ ಡಿ.ಎನ್.(ಶೃಂಗೇರಿ) : ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶೃಂಗೇರಿ, ಕೊಪ್ಪ ಹಾಗೂ ನರಸಿಂಹರಾಜಪುರ ತಾಲ್ಲೂಕುಗಳಲ್ಲಿ ಪ್ರಸಕ್ತ ಸಾಲಿನಲ್ಲಿ ಮರಳು ಹರಾಜು ನಡೆಸಲಾಗಿದೆಯೇ; ನಡೆಸಲಾಗದಿದ್ದಲ್ಲಿ ಕಾರಣಗಳೇನು ;

ಆ) ಈ ಮೂರು ತಾಲ್ಲೂಕುಗಳಲ್ಲಿ ಅಧಿಕೃತವಾಗಿ ಮರಳು ಗುತ್ತಿಗೆ ನೀಡಲು/ನೀಡುತ್ತಿರುವ ಸ್ಥಳಗಳು ಯಾವುವು;

ಇ) ಈ ತಾಲ್ಲೂಕುಗಳಲ್ಲಿ ಯಂತ್ರ ಉಪಯೋಗಿಸಿ ಮರಳನ್ನು ತೆಗೆಯಲು ಅನುಮತಿ ನೀಡಲಾಗಿದೆಯೇ :

ಈ) ನೀಡಲಾಗಿದ್ದಲ್ಲಿ, ಯಾವ ಯಂತ್ರವನ್ನು ಉಪಯೋಗಿಸಲು ಅನುಮತಿ ನೀಡಲಾಗಿದೆ;